O.S. No- 244/2023

Pw-2

<u>ದಿನಾಂಕಃ 25-02-2026-ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**ಮುಖ್ಯ ವಿಚಾರಣೆಃ ಶ್ರೀ. ವಿ ಬಿ ಟಿ ವಾದಿ ಪರ ವಕೀಲರಿಂದ-**

ನಾನು ಈ ದಿನ ನನ್ನ ಪ್ರಮಾಣಿಕೃತ ಸಾಕ್ಷಿಯ ಬದಾಲಾಗಿ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಸಂಗತಿಗಳು ನನ್ನ ಮಾಹಿತಿಯ ಮೇರೆಗೆ ನಿಜವಾಗಿರುತ್ತವೆ ಅದನ್ನು ನನ್ನ ಸಾಕ್ಷಿಕೃತ ಹೇಳಿಕೆಯಂತೆ ಪರಿಗಣಿಸಬೇಕಾಗಿ ವಿನಂತಿ ಇದೆ. ನನ್ನ ದಾವೆಗೆ ಪೂರಕವಾಗಿಃ-

1. ಸಾಕ್ಷಿಗೆ ನಿಪಿ-8 ದಾಖಲೆಯನ್ನ ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ನಿಪಿ-8(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯನ್ನು ವಾಸಾ-2 ಎಂದು ಪರಿಗಣಿಸಲಾಯಿತು.

**ಪಾಟಿ ಸವಾಲುಃ ಶ್ರೀ ಡಿ ಡಿ ಜೆ 1ನೇ ಪ್ರತಿವಾದಿ ಪರ ವಕೀಲರಿಂದಃ** ಸಾಕ್ಷಿ ನುಡಿಯಲು ನ್ಯಾಯಾಲಯದಿಂದ ಯಾವುದೇ ಸಮನ್ಸ ಬಂದಿಲ್ಲ. ವಕೀಲರು ಹೇಳಿದ್ದರಿಂದ ಬಂದಿದ್ದೇನೆ. ನನ್ನ ಸಾಕ್ಷ್ಯಾ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ಈ ದಾವೆಯಲ್ಲಿನ ವಾದಿ ಮತ್ತು ಪ್ರತಿವಾದಿಯರು ವೈಯಕ್ತಿಕ ಪರಿಚಯ ಇಲ್ಲ ಎಂದರೆ ಸರಿ. ವಾದಿಯ ಸಹೋದರಿಯವರ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿ. ಖರೀದದಿ ಪತ್ರವನ್ನು ಬರೆದುಕೊಟ್ಟವರು ವಾದಿಗೆ ಏನು ಸಂಬಂದ ಇದೆ ಎಂದು ವಕೀಲರು ಎಂದರೆ ಸರಿಯಲ್ಲ. ಖರೀದಿ ಪತ್ರವನ್ನು ಬರೆದವರು ಈಗ ಜೀವಂತ ಇದ್ದಾರೋ ಇಲ್ಲವೋ ಎಂಬ ಪ್ರಶ್ನೆಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ಖರೀದಿ ಪಡೆದವರಿಗೆ ಸಹೋದರಿ ಎಂಬುದವನ್ನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ. ಸಾಕಷ್ಟು ಜನ ಸಾಮಾನ್ಯವಾಗಿ ಭದ್ರತೆಗಾಗಿ ಖರೀದಿ ಕರಾರು ಪತ್ರ ಬರೆಸಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಹಣ ಮುಟ್ಟಿದೆ ಎಂದು ಹೇಳಿರುತ್ತಾರೆ. ಹಣ ಮುಟ್ಟಿದ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿಲ್ಲ. ಖರೀದಿ ಕರಾರು ಪತ್ರ ಹಣವನ್ನು ಯಾವಾಗ ಯಾವ ರೀತಿ ಎಂದು ನಮೂದು ಇಲ್ಲ ಎಂದರೆ ಸರಿ. ವಾದಿ ಮತ್ತು ಪ್ರತಿವಾದಿಯರ ವೈಯಕ್ತಿಕ ಮಾಹಿತಿ ಇಲ್ಲ. ವಾದಿ ಹಾಗೂ ಪ್ರತಿವಾದಿಯರ ನಡುವೆ ಯಾವುದೇ ವ್ಯವಹಾರವಾಗಿಲ್ಲ ಎಂದರೆ ಸರಿಯಲ್ಲ. ನಿಪಿ-8 ದಾಖಲೆ ಭದ್ರತೆಗಾಗಿ ಬರೆದುಕೊಟ್ಟಿದೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲೆಯಂತೆ ದಾವಾ ಆಸ್ತಿಯನ್ನು ಕಬ್ಜಾವನ್ನು ಕೊಟ್ಟಿಲ್ಲ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಅನುಕೂಲ ಮಾಡಲು ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾಖಲೆ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.